**MS – 040**

**ಎರಡನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಮೇ/ಜೂನ್ 2014**
**(ಫ್ರೆಷರ್ಸ್ + ರಿಪೀಟರ್ಸ್) (2011-12 and Onwards)**
**ಕನ್ನಡ ಭಾಷಾ ಪತ್ರಿಕೆ – II**
**ಸಾಹಿತ್ಯ ಸಲ್ಲಾಪ - I**

ಸಮಯ: 3 ಗಂಟೆಗಳು ಗರಿಷ್ಠಾಂಕಗಳು: 100

I. 1) ಈ ಪದ್ಯದ ಭಾವಾರ್ಥ ಬರೆಯಿರಿ: (1×6=6)

ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ
ಪಿಡಿಯಿಪ್ಪೆಂ ಕರಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ
ಪಡುವೆಣ್ಗಾವುದು ಪೋಗೆ ಪೋಗಡಿಸುವೆಂ ನಿಚ್ಚಂ ಧರಾಧೀಶರಂ
ಪಡಲಿಟ್ಟಂತಿರೆ ಮಾೞ್ಪೆನೋವದೆ ಪಯಿಂಭಾಸಿರ್ವರಂ ಯುದ್ಧದೊಳ್

2) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: (2×3=6)

1) ಸೌಗಂಧಿಕಾ ಪುಷ್ಪ
2) ಕೆ. ಎಸ್. ನಿಸಾರ್ ಅಹಮದ್
3) ಸೋಮದತ್ತ
4) 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ'

II. 1) ಇವುಗಳಲ್ಲಿ ಐದು ಪದಗಳಿಗೆ ಮೂಲ ರೂಪ ಬರೆಯಿರಿ: (1×5=5)

1) ಬ್ಯಾಸರ 2) ಕ್ಲಬ್ಬು 3) ತ್ವಾಟ 4) ಬ್ಯಾಗ
5) ವಿಲೇಜು 6) ಹಂಗೇ 7) ಆಫೀಸು

2) ಇವುಗಳಲ್ಲಿ ಐದು ಪದಗಳಿಗೆ ಅರ್ಥ ಬರೆಯಿರಿ: (1×5=5)

1) ಉರ್ಕು 2) ಮೊನೆ 3) ಅಬ್ಜ 4) ಹದುಳ
5) ನುಚ್ಚುನೂರು 6) ಕಣ್ಣುಕೆಂಪಾಗು 7) ತನುಜ

3) ಇವುಗಳಲ್ಲಿ ಐದು ಪದಗಳನ್ನು ಬಿಡಿಸಿ ಬರೆಯಿರಿ: (1×5=5)

1) ನುಂಗಲಾಗದ 2) ಅನ್ಯರನುಭವ 3) ಹುಬ್ಬೇರಿಸಬೇಡಿ 4) ಮರ್ತ್ಯಾತೀತ
5) ಮನಸ್ಸಿಲ್ಲಿ 6) ಬಟ್ಟಲುಗಣ್ಣು 7) ಮೈದೋರು

P.T.O.

4) ಇವುಗಳಲ್ಲಿಯ ಉಪಮೆ, ರೂಪಕಗಳನ್ನು ಬಳಸಿ ಸ್ವಂತವಾಕ್ಯ ರಚಿಸಿ : (1×5=5)

1) ಕಮಲಾಕ್ಷಿ 2) ಬಳುಕುವ ಬಳ್ಳಿಯಂತೆ 3) ಸುವರ್ಣನಗರಿ

4) ಜ್ಞಾನೇಶ್ವರಿ 5) ಮುಖಚಂದ್ರ

III. ಇವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : (4×5=20)

1) ಭೀಮ–ಹನುಮರ ನಡುವೆ ವಾಗ್ವಾದ ಉಂಟಾಗಲು ಕಾರಣವೇನು ?

2) ಮೂರು ಮುಖಗಳು ಕವಿತೆಯ ಆಶಯವನ್ನು ಕುರಿತು ಬರೆಯಿರಿ.

3) ಗಿರಿಜವ್ವನ ವ್ಯಕ್ತಿತ್ವವನ್ನು ಪರಿಚಯಿಸಿ.

4) ವಿನೋಬಾಜಿಯವರು ಯಾರ ಆತ್ಮಚರಿತ್ರೆಗಳನ್ನು ಓದಿರುವುದಾಗಿ ಹೇಳಿದ್ದಾರೆ ? ಅವುಗಳ ವೈಶಿಷ್ಟ್ಯವೇನು ?

5) ಆಧುನಿಕ ಸಮಾಜಕ್ಕೆ ಗಣಕಯಂತ್ರದ ಉಪಯೋಗಗಳನ್ನು ತಿಳಿಸಿ.

6) ಅರುಂಧತಿಯ ಪಾತ್ರವನ್ನು ಪರಿಚಯಿಸಿ.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : (4×12=48)

1) ಕುಲದ ಬಗ್ಗೆ ಕರ್ಣ ಮತ್ತು ದ್ರೋಣರ ನಡುವೆ ನಡೆಯುವ ವಾಗ್ವಾದವನ್ನು ವಿವರಿಸಿ.

ಅಥವಾ

ಹಿಂದೂ ಸಮಾಜದಲ್ಲಿ ಹೆಣ್ಣು ಗಂಡಿನ ಆಶ್ರಯವಿಲ್ಲದೆ ಬದುಕುವುದು ಸುಲಭ ಸಾಧ್ಯವೇ ? ಅಸಾಧ್ಯವೇ ? ವಿಚಾರಮಾಡಿ.

2) 'ತಾಯಿ' ಕಥೆಯಲ್ಲಿನ ಕ್ಯಾನ್ಸರ್ ಕಾಯಿಲೆ ಯಾವುದರ ಸಂಕೇತ ? ಅದು ಗುಣಪಡಿಸಲು ಸಾಧ್ಯವೇ ? ವಿಶ್ಲೇಷಿಸಿ.

ಅಥವಾ

ದಲಿತ ಸಂಘಟಕರ ಬಗ್ಗೆ ದೇವನೂರು ಮಹಾದೇವರ ನಿಲುವುಗಳೇನು ? ವಿವರಿಸಿ.

3) ದುಗ್ಗಪ್ಪನ ಕ್ರಾಂತಿಕಾರಿ ವ್ಯಕ್ತಿತ್ವವನ್ನು ಪರಿಚಯಿಸಿ.

ಅಥವಾ

ಬದುಕಿನ ವಿವಿಧ ಕ್ರಮಗಳನ್ನು ನಿಸಾರ್ ಅಹಮದರು ಹೇಗೆ ವಿಶ್ಲೇಷಿಸಿದ್ದಾರೆ ? ತಿಳಿಸಿ.

4) ಜ್ಞಾನವೆಂಬುದು ಪರಂಪರೆಯ ಮೂಲವೋ ? ಪ್ರಯತ್ನದ ಮೂಲವೋ ? 'ಕಪಿಲ' ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿ.

ಅಥವಾ

'ಸೋಮದತ್ತನ ಪ್ರಾಣವನ್ನು ಕಪಿಲ ಉಳಿಸಿದ. ಕಪಿಲನ ಬದುಕನ್ನು ಸೋಮದತ್ತ ನಿಲ್ಲಿಸಿದ' – ಈ ಹೇಳಿಕೆಯನ್ನು ನಾಟಕದ ಹಿನ್ನೆಲೆಯಲ್ಲಿ ವಿಚಾರ ಮಾಡಿ.

---